ರೀತಿಗೆ ಬೆರಗಾಗಿದ್ದೆ – ಭಯಪಟ್ಟಿದ್ದೆ. ಅಣ್ಣ ಕಾರಣವಿರಬಹುದೇ ಅನ್ನುವ ಸಂದೇಹ ಕೆಲವೊಮ್ಮೆ ಕಾಡುತ್ತಿತ್ತು. ಅವನ ನಡವಳಿಕೆಯ ಗಾಂಭೀರ್ಯದ ಪದರುಗಳ ನಡುವೆ ಅದೆಷ್ಟು ನಿಗೂಢ ನ್ಯಾಸ–ವಿನ್ಯಾಸಗಳಿದ್ದುವೋ – ತಿಳಿಯುತ್ತಿರಲಿಲ್ಲ. ನನ್ನ–ಅಣ್ಣನ ನಡುವಿನ ಅಗಲಗಳೂ ಅಲ್ಲಿಂದಲೇ ತೊಡಗಿರಬಹುದೆ–ಗೊತ್ತಿಲ್ಲ.

ಮೂರು ತಿಂಗಳಿಗೇ ಮತ್ತೆ ತವರಿಗೆ ಮರಳಿಬಂದ ಎಲಿಸಾ ಮುಂದೆಂದೂ ಗಂಡನ ಮನೆಗೆ ಹೋಗಲೇ ಇಲ್ಲ. ತನ್ನ ತಂದೆಗಿಂತ ಉತ್ಕಟ ಕುಡುಕನಾದ ಆತನೊಡನೆ ಬದುಕುವುದು ಸಾಧ್ಯವೇ ಇಲ್ಲ ಅಂತ ಇಲ್ಲೆ ಕೂತುಬಿಟ್ಟಳು. ಉಬ್ಬಿದ ಹೊಟ್ಟೆ ಆಕೆಯ ಬಸಿರನ್ನು ಸಾರುತ್ತಿತ್ತು. “ಮದುವೆಗೆ ಮೊದಲೇ ಆಗಿದ್ದಳಂತೆ. ಅದಕ್ಕೇ ಬಿಟ್ಟಿದ್ದಾರೆ...'' ಅಂತ ಊರಲ್ಲೆಲ್ಲ ಎದ್ದ ಪುಕಾರು ಆಕೆಯ ನಡವಳಿಕೆಯ ಸೌಜನ್ಯದ ಹಿಂದೆ ಅದೆಲ್ಲೋ ಅಡಗಿಹೋಯ್ತು. ಅಷ್ಟರಲ್ಲೆ ಸಂಭವಿಸಿದ ತಂದೆ ದೂಜ ಪುರ್ಬುವಿನ ಮರಣ ಮಾತ್ರ ಎಲಿಸಾಳ ಬದುಕಿಗೆ ಅಸಹನೀಯ ಅತಂತ್ರತೆಯನ್ನು ಹೊದಿಸಿ, ತನ್ನವರೇ ಇಲ್ಲದ ತಬ್ಬಲಿತನಕ್ಕೆ ನೂಕಿಬಿಟ್ಟಿತು. ಸಾಯಂಕಾಲವೇ ಒಡಲು ಬಿರಿಯುವಂತೆ ಕುಡಿದು ಮತ್ತಿನಲ್ಲೆ ಮನೆ ಸೇರುತ್ತಿದ್ದಾತ, ರಸ್ತೆಯಂಚಿನ ಬಾವಿಯಲ್ಲಿ ಬಿದ್ದು ಸತ್ತನೋ, ಸತ್ತು ಬಿದ್ದನೋ ಅಂತೂ ಇಲ್ಲವಾದ. ಆ ದಿನಗಳಲ್ಲಿ ಎಲಿಸಾ ಮತ್ತೆ ನಮ್ಮ ಆಸರೆ ಅರಸಿ ಬರಬಹುದು ಅನ್ನುವ ಆತಂಕ ಅಮ್ಮನ ಅಂತರಂಗದಲ್ಲಿ ನಿರಂತರವಾಗಿತ್ತು. ಆದರೆ ಆಕೆ ಬರಲೇ ಇಲ್ಲ. ಚರ್ಚು, ಫಾದರು, ಸಿಸ್ಟರು ಅಂತ ಒಂದಿಷ್ಟು ಓಡಾಡಿ ಆಮೇಲೆ ನಮ್ಮ ಊರಿನಿಂದಲೇ ದೂರವಾಗಿಬಿಟ್ಟಳು. ಯಾವುದೋ ಸೇವಾಶ್ರಮದಲ್ಲಿ ಸೇರಿಕೊಂಡಿದ್ದಾಳೆ ಅನ್ನುವ ವದಂತಿಯಿಂದ ಅಮ್ಮ ಒಳಗೇ ನೆಮ್ಮದಿಯಾದಳು. “ಹೆಣ್ಣು ಮಗುವಂತೆ.'' “ಏನೋ ಕೆಲಸಕ್ಕೆ ಸೇರಿದ್ದಾಳಂತೆ.'' “ಮತ್ತೆ ಮದುವೆಯಾದಳಂತೆ'' ಅಂತೆಲ್ಲ ತುಣುಕು ಸುದ್ದಿಗಳು ಆಗೀಗ ಊರಲ್ಲಿ ಸುಳಿಯುತ್ತಿದ್ದವು. ಅವರದಾಗಿದ್ದ ಜಾಗ–ಮನೆ ಅಲ್ಲಿಗೇ ಪಾಳು ಬೀಳತೊಡಗಿತ್ತು. ನಮ್ಮ ಭತ್ತದ ಗದ್ದೆಗಳ ನಡುವೆ ಬದುಗಳಲ್ಲಿ ಓಡಾಡುವಾಗೆಲ್ಲ ಕಾಡುವ ನೆನಪುಗಳು ಮತ್ತು ಕಂಗೆಡಿಸುವ ಖಾಲಿಗಳು... ಬೇರೆ ಯಾರೂ ಇವನ್ನು ಅಳಿಸುವಂತಿಲ್ಲ.

ಹೊರಜಗಲಿಯಲ್ಲೇ ನಿಂತಿದ್ದ ಎಲಿಸಾಳನ್ನು ಕೈಹಿಡಿದು ಒಳಗೆಳೆದುಕೊಂಡೆ. ಹಿಂದಿನಂತೇ ಬಿಗಿದಪ್ಪಿ ತಲೆ ಸವರಿದಳು. ಅಂದಿನ ಪ್ರಸನ್ನ ಮುಖಮುದ್ರೆಯ ಮೇಲೆ ಇಂದು ಮೂಡಿನಿಂತ ನಾಲ್ಕಾರು ಹೊಸ ನಿರಿಗೆಗಳು. ಅವುಗಳಲ್ಲೆ ಉಕ್ಕುವ ಮಮತೆಯ ಭಾವಸಾಂದ್ರತೆ. “ಮಾಲಕ್ಕಾ ಯಾವಾಗ ಬಂದೆ? ಹೇಗಿದೀಯ?'' ಎಂದು ಹನಿಗಣ್ಣಾದಳು. “ನಿನ್ನೆ ತಾನೇ ಬಂದೆ. ನೀನು ಹೇಗಿದೀಯ? ಮತ್ತೆ ಮನೆಗೆ ಬಂದಿರುವೆಯಂತೆ ಹೌದ?'' ವಿಚಾರಿಸಿದೆ. “ನನ್ನ ಅಳಿಯ ಇಲ್ಲೇ ಪೇಟೆಯಲ್ಲಿ ಒಂದು ಫ್ಯಾಕ್ಟರಿ ತೊಡಗಿದ್ದಾನೆ. ನಾವೆಲ್ಲ ಇಲ್ಲೇ ಇದ್ದೇವೆ. ಹಳೆ ಮನೆ ಕೆಡವಿ ಅಲ್ಲೇ ಹೊಸಮನೆ ಕಟ್ಟಿಸಿದ್ದೇವೆ.'' ಅಂತ ಹೊಸ ವಿವರಗಳನ್ನು ಕೇಳಿ ಸುಖವೆನಿಸಿತು. ಮಾತಾಡುತ್ತ ಆಕೆಯ ಬಾಳಿನ ಮರೆಯಾದ ಮಗ್ಗುಲುಗಳೆಲ್ಲ ಒಂದೊಂದಾಗಿ ತೆರೆದುಕೊಂಡವು. ಈಗ ಮಗಳು ಮೂರು ದಿನದ ಬಾಣಂತಿ. ಮದುವೆಯಾಗಿ ಹತ್ತು ವರ್ಷದ ಬಳಿಕ ವಿಶೇಷವಾಗಿ ಒದಗಿದ ತಾಯ್ತನ. ಆದರೆ ಎದೆ ಹಾಲೇ ಇಲ್ಲದೆ ಒಡಲು ಬರಿದಾಗಿದೆ. ಯಾಕೋ ಮಗು ಬೇರೇನು ಕೊಟ್ಟರೂ ಕುಡಿತಾ ಇಲ್ಲ. ಎರಡು ದಿನದಿಂದ ಹಗಲುರಾತ್ರಿ ಅತ್ತು ಅತ್ತು ಅರ್ಧವಾಗಿದೆ. ಮುಂದುಗಾಣದ ತಳಮಳ ಮತ್ತೆ ನಮ್ಮ ಮನೆ ಬಾಗಿಲಿಗೆ ಆಕೆಯನ್ನು ಎಳೆತಂದಿತ್ತು. ಹಿಂದೆಲ್ಲ ಸಹಜವಾಗಿತ್ತು. ಸಮಸ್ಯೆಗಳು ಎದುರಾದಾಗ ಯಾರೇ ಬಂದು ಹೇಳಿಕೊಂಡರೂ ಅಮ್ಮ ತಾನೇ ಪರಿಹಾರವಾಗಿ ಪರಿಣಮಿಸುತ್ತಿದ್ದಳು. ಈಗ... ಆಕೆಗೇನು ಹೇಳಬಹುದು?

ನನ್ನ ಹಿಂದೆ ಬಂದು ನಿಂತಿದ್ದ ಸಂಯುಕ್ತ ಅದಾಗಲೇ ಎಲ್ಲ ಕೇಳಿಸಿಕೊಂಡಿದ್ದಳು. ಮನೆಯೊಳಗಿಂದ ಮತ್ಯಾರೂ ಹೊರಗೇ ಬರಲಿಲ್ಲ. “ಒಂದು ಲೋಟ ಕಾಫಿ ತರ್ಲೀಯಾ?'' ಅಂದೆ. ಓಡಿಹೋಗಿ